ಈಶ್ವರಚಂದ್ರ

# ಸೋಮಾರಿಗೆ ಜಾಗವಿಲ್ಲ

ಅಜಿತ ರಜಕ್ಕೆ ಅಜ್ಜ ಅಜ್ಜಿಯ ಮನೆಗೆ ಬಂದಿದ್ದ. ಅಲ್ಲಿ ಅಜ್ಜ ಬಿಡುವಾದಾಗಲೆಲ್ಲ ಅವನಿಗೆ ಕತೆ ಹೇಳುತ್ತಿದ್ದರು. ಒಂದು ಸಲ ಒಬ್ಬ ಹುಡುಗ ಗೊದ್ದ, ಜೇನುಹುಳ, ಗುಬ್ಬಿ ಮುಂತಾದವುಗಳಿಂದ ಹೇಗೆ ಪಾಠ ಕಲಿತ ಎಂಬ ಕತೆಯನ್ನು ಹೇಳಲು ಪ್ರಾರಂಭಿಸಿದರು.

'ಓ... ನಂಗೆ ಈ ಕತೆ ಗೊತ್ತು. ನಾನು ಪೇಪರ್‌ನಲ್ಲಿ ಓದಿದೀನಿ!' ಎಂದ ಅಜಿತ.

'ಇದು ಸ್ವಲ್ಪ ಬೇರೆಯಾಗಿದೆ ಕೇಳು' ಎಂದು ಅಜ್ಜ ಕತೆ ಹೇಳತೊಡಗಿದರು.

ಸೋಮು ಅಂತ ಒಬ್ಬ ಹುಡುಗ ಇದ್ದ. ಅವನು ತುಂಬ ಸೋಮಾರಿ. ಯಾವ ಕೆಲಸವನ್ನೂ ಸರಿಯಾಗಿ ಮಾಡುತ್ತಿರಲಿಲ್ಲ. ಹೋಮ್‌ವರ್ಕ್ ಮಾಡಿಕೊಂಡು ಹೋಗದೆ ಶಾಲೆಯಲ್ಲಿ ಮೇಷ್ಟರಿಂದ ಬೈಯಿಸಿಕೊಳ್ಳುತ್ತಿದ್ದ. ಮನೆಯಲ್ಲೂ ಅವನ ಕೋಣೆ ಕಸದ ತಿಪ್ಪೆ. ಎಲ್ಲೆಲ್ಲೂ ಪುಸ್ತಕ, ಬಟ್ಟೆಗಳ ರಾಶಿ. ಅವನ ಕೋಣೆಯನ್ನು ಓರಣ ಮಾಡಿ ಮಾಡಿ ಅವನ ತಾಯಿಗೆ ಸಾಕಾಯಿತು. ಕೊನೆಗೆ ಒಂದು ಭಾನುವಾರ,

